ಮುರಿಯುವುದು ಸುಲಭ. ಕಟ್ಟಿಕೊಳ್ಳುವುದು ಕಷ್ಟ. ನೀನು ಅರ್ಥಮಾಡಿಕೋ. ದಯವಿಟ್ಟು ಡಿವೋರ್ಸ್ ಕೊಟ್ಟು ಮಗಳ ಭವಿಷ್ಯ ಹಾಳು ಮಾಡಬೇಡ.

ಅವಳು ಸ್ವಲ್ಪ ಮೆತ್ತಗಾದಳು. – ಅಂದು ನಿನ್ನ ಹೋಮಿಯೋಪತಿಕ್ ಡಾಕ್ಟರಿಕೆಗಾಗಿ ನಿನ್ನನ್ನು ಕ್ಷಮಿಸಿದೆ. ಈಗ ನೀನು ಸಿಖ್‌ನಂತೆ ವರ್ತಿಸಿ ನನಗೆ ಮೋಸ ಮಾಡಿದುದಕ್ಕೆ ನಿನ್ನನ್ನು ಕ್ಷಮಿಸಬೇಕಿದೆ. ನಾನು ನಿನಗೆ ಡಿವೋರ್ಸ್ ಕೊಟ್ಟರೆ ನನ್ನ ಮಗಳು ಅಪ್ಪನಿಲ್ಲದೆ ಬೆಳೆಯುತ್ತಾಳೆ. ಅದೊಂದು ಕೊರತೆ ಉಳಕೊಳ್ಳುತ್ತದೆ. ಆಗಲಿ. ನಿನ್ನನ್ನು ಈ ಸಲವೂ ಕ್ಷಮಿಸುತ್ತೇನೆ. ನೀನು ಮೂರನೆಯ ತಪ್ಪು ಮಾಡಿದರೆ ಮತ್ತೆ ಕ್ಷಮೆ ಇರುವುದಿಲ್ಲ. ಚೆನ್ನಾಗಿ ಕೇಳಿಸಿಕೋ.

ನಾನು ಗೆಲುವಿನ ನಗೆ ಬೀರಿದೆ. ಜೀವನ ಸುಖಮಯವಾಗಿ ಸಾಗುವಾಗ ಮೂರನೆಯ ತಪ್ಪು ಸಂಭವಿಸಿತು."

"ಮೂರನೆಯ ತಪ್ಪೇ? ನಿಮ್ಮ ಹೆಂಡತಿ ಡಿವೋರ್ಸ್ ಕೊಡುತ್ತಾರೆಂದು ತಿಳಿದೂ ತಪ್ಪು ಮಾಡಿದಿರಾ?"

ಡಾ. ಸೋನಿಪತ್ ನಿಡುಸುಯ್ದರು.

"ಚೆನ್ನಾಗಿ ಕೇಳಿಸಿಕೋ ಜಂಟಲ್‌ಮ್ಯಾನ್. ನನ್ನ ಪ್ರಕಾರ ಅದು ತಪ್ಪಲ್ಲ. ಆದರೆ, ನನ್ನ ಹೆಂಡತಿಯ ಪಾಲಿಗೆ ಅದು ಘನಘೋರ ತಪ್ಪು."

ಡಾ. ಸೋನಿಪತ್ ಮಾತು ನಿಲ್ಲಿಸಿ ಸೂರನ್ನು ನಿಟ್ಟಿಸಿದರು. ಆಮೇಲೆ ನನ್ನ ಮುಖವನ್ನೇ ನೋಡಿದರು.

"ಆಗ ನಾನು ಇದ್ದುದು ಬ್ರಿಟಿಷ್ ಕಸ್ಟಮ್ಸ್‌ನಲ್ಲಿ. ಆಗಿನ ಕನ್ಸರ್ವೇಟಿವ್ ಸರಕಾರ ಇಂಡಿಯಾದ ಹಿತಾಸಕ್ತಿಗೆ ಮಾರಕವಾದ ಸುಂಕ ನೀತಿಯೊಂದನ್ನು ಅನುಷ್ಠಾನಕ್ಕೆ ತರುವ ಹುನ್ನಾರ ನಡೆಸಿತ್ತು. ನನಗೆ ಅದರ ಪಿನ್ ಟು ಪಿನ್ ಮಾಹಿತಿ ಸಿಕ್ಕಿ ಎಲ್ಲವನ್ನೂ ಇಂಡಿಯನ್ ಗವರ್ನಮೆಂಟಿಗೆ ತಿಳಿಸಿಬಿಟ್ಟೆ. ಅದೇ ನಾನು ಮಾಡಿದ ತಪ್ಪು."

"ಅದರಲ್ಲಿ ನಿಮ್ಮ ತಪ್ಪೇನಿದೇ? ನೀವು ದೇಶ ಸೇವೆ ಮಾಡಿದ್ದೀರಿ, ಅಷ್ಟೇ."

"ಬ್ರಿಟಿಷ್ ಅನ್ನವನ್ನು ಉಣ್ಣುತ್ತಿದ್ದ ನಾನು ಬ್ರಿಟನ್ನಿನ ನೀತಿಯನ್ನು ಜಾರಿಗೆ ಬರುವ ಮೊದಲೇ ಲೀಕ್ ಮಾಡಬಾರದಿತ್ತು. ಇದರಿಂದ ಬ್ರಿಟಿಷ್ ಸರಕಾರಕ್ಕೆ ಇನ್ನಿಲ್ಲದ ಮುಜುಗರ ಉಂಟಾಯಿತು. ನನ್ನನ್ನು ಸರಕಾರ ತಕ್ಷಣ ಸೇವೆಯಿಂದ ವಜಾಗೊಳಿಸಿತು. ನಾನು ಆ ಆಜ್ಞೆಯ ವಿರುದ್ಧ ಕೋರ್ಟಿಗೆ ಹೋದೆ. ಕೋರ್ಟಿನಲ್ಲಿ ಸರಕಾರ ನನ್ನ ವಿರುದ್ಧ ಸಾಕ್ಷ್ಯ ಮಂಡಿಸುವಲ್ಲಿ ಎಡವಿತು. ಆದುದರಿಂದ ನನ್ನನ್ನು ಮತ್ತೆ ಸರ್ವಿಸ್ಸಿಗೆ ಸೇರಿಸಿಕೊಂಡಿತು. ಆದರೆ, ಹಿರಿಯ ಅಧಿಕಾರಿಯಿಂದ ನನ್ನ ವಿರುದ್ಧ ಇಂಡಿಸಿಪ್ಲಿನ್ ದೂರು ದಾಖಲಿಸಿ ವಾಲಂಟರಿ ರಿಟಾಯರ್‌ಮೆಂಟ್ ತೆಗೆದುಕೊಳ್ಳುವಂತೆ ಒತ್ತಾಯಿಸತೊಡಗಿತು. ದೇಶದ್ರೋಹದ ಆಪಾದನೆ ಮತ್ತೆ ಹೊರಿಸಿ ಸ್ಕಾಟ್‌ಲೆಂಡ್‌ಯಾರ್ಡ್ ಪೊಲೀಸರಿಂದ ನನ್ನನ್ನು ವಿಚಾರಣೆಗೊಳಪಡಿಸಿತು. ಸ್ಕಾಟ್‌ಲೆಂಡ್‌ಯಾರ್ಡ್ ಪೊಲೀಸರು ಪದೇಪದೇ ಮನೆಗೆ ದಾಳಿ ಇಡತೊಡಗಿದರು. ನನ್ನ ವೈಯಕ್ತಿಕ ಶಾಂತಿ ನಾಶವಾಯಿತು. ಒಂದು ದಿನ ಅವರು ಅದೇನೋ ದಾಖಲೆ ಸೃಷ್ಟಿಸಿ ವಾಲಂಟರಿ ರಿಟಾಯರ್‌ಮೆಂಟ್ ಕೊಡಿಸಿಯೇ ಬಿಟ್ಟರು."

"ಅಲ್ಲಿಗೆ ಪ್ರಕರಣಗಳನ್ನು ಕೈ ಬಿಟ್ಟರೆ?"

"ಇಲ್ಲ, ನನ್ನ ಮೇಲೆ ಬೇರೆ ಬೇರೆ ಕಾಲಂಗಳನ್ನು ನಮೂದಿಸಿ ಆರು ಕೇಸುಗಳನ್ನು ಹಾಕಿದರು. ನನಗೆ ಅರ್ಧ ಮಾಸಾಶನ ಕೊಟ್ಟು ನಾನು ಆರ್ಥಿಕ ಸಮಸ್ಯೆಯಲ್ಲಿ ಸಿಕ್ಕಿ ಹಾಕಿಕೊಳ್ಳುವಂತೆ ಮಾಡಿದರು. ಪೊಲೀಸರ ಜಡತಿಗಳಿಂದ ಕೋಪಗೊಂಡ ನನ್ನ ಪತ್ನಿ – ಇದು ನೀನು ಮಾಡಿದ ಮಹಾ ತಪ್ಪು. ನಿನ್ನದು ರಾಷ್ಟ್ರದ್ರೋಹ. ಇನ್ನು ನಿನ್ನೊಡನೆ ನಾನು ಬದುಕಲಾರೆ ಎಂದು ಡಿವೋರ್ಸಿಗೆ ಅರ್ಜಿ ಹಾಕಿದಳು. ಕಸ್ಟಮ್ಸ್ ಡಿಪಾರ್ಟ್‌ಮೆಂಟ್‌ನಿಂದ ಎಂಡೋರ್ಸ್‌ಮೆಂಟ್ ತೆಗೊಂಡಳು. ಕಾರಣ ನೋಡಿ ಉರಿದೆದ್ದ